ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-21 ಸಂಚಿಕೆ-3 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ಮಂಟಪದಲ್ಲಿ ಮಹಾಶಿವರಾತ್ರಿ





ತಾ.11-03-2021ರಂದು ಶ್ರೀ ಶಾರದಾ ಮಂಟಪದಲ್ಲಿ ಮಹಾಶಿವರಾತ್ರಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಅಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಶಾರದಾ ದೇವಸ್ಥಾನ ದಲ್ಲಿ ಪ್ರಾರ್ಥನೆಯೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾದವು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್, ಜತೆ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ, ಕೋಶಾಧಿಕಾರಿ ಶ್ರೀ ಬಿ. ಜಯರಾಮರಾವ್ ಹಾಗೂ ಇತರ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರು ರುದ್ರಾಭಿಷೇಕ ವನ್ನು ವಿಧಿಯುಕ್ತವಾಗಿ ನೆರವೇರಿಸಿದರು. ಸ್ವಾಧ್ಯಾಯ ತಂಡದವರಿಂದ ಪಾರಾಯಣ ನೆರವೇರಿತು. ಸುಮಾರು ಹತ್ತು ಗಂಟೆಗೆ ಮುಖ್ಯ ಸಭಾಭವನದಲ್ಲಿ ಶ್ರೀ ಚಿಟ್ಪಾಡಿ ಸತೀಶ್ ರಾವ್ ಹಾಗೂ ಶ್ರೀಮತಿ ಸುಕನ್ಯಾ ದಂಪತಿಗಳು ದೀಪ ಬೆಳಗಿಸಿ ಭಜನಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಸತೀಶ್ ರಾವ್‌ರವರ ತಾಯಿ ಶ್ರೀಮತಿ ನಾಗವೇಣಿ ಅಮ್ಮನವರು ತಮ್ಮ ಪತಿ ದಿ। ಗೋವಿಂದ ರಾವ್ ಸ್ಮರಣಾರ್ಥ ರೂ.51,000/-ಗಳನ್ನು ದೇಣಿಗೆಯಾಗಿ ನೀಡಿದರು. ನಂತರ ಉಡುಪಿ ಶ್ರೀ ಶಾರದಾ ಭಜನಾ ತಂಡ ಹಾಗೂ ಪಡುಬಿದ್ರೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ಸದಸ್ಯರಿಂದ ಶಿವಭಕ್ತಿ ಗೀತೆಗಳ ಭಜನಾ ಕಾರ್ಯಕ್ರಮ ನೆರವೇರಿತು. ಶ್ರೀಮತಿ ಯಶೋದಾ ಕೋಲ್ಪೆ ಹಾರ್ಮೋನಿಯಂ ನಲ್ಲಿ ಸಾಥ್ ನೀಡಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಸಲಹೆಗಾರರಾದ ಶ್ರೀ ವೈ. ಭುವನೇಂದ್ರ ರಾವ್, ಶ್ರೀ ಕೆ. ಸುಧಾಕರ ರಾವ್ ಮತ್ತು ಶ್ರೀ ಬಿ.ಸುರೇಶ್ ರಾವ್‌ರವರು ಭಜನಾ ತಂಡದ ಸದಸ್ಯೆಯರಿಗೆ ಶಾಲುಹೊದಿಸಿ ಸ್ಮರಣಿಕೆ ಹಾಗೂ ಕಿರುಕಾಣಿಕೆಯಿತ್ತು ಸನ್ಮಾನಿಸಿದರು. ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆ ನೆರವೇರಿತು. ಮಧ್ಯಾಹ್ನದ ಫಲಾಹಾರ ಪ್ರಸಾದದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.





## ಯುವ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ ದಿನಾಂಕ 21-03-2021ನೇ ರವಿವಾರದಂದು ಬೆಳಿಗ್ಗೆ 9-30ಕ್ಕೆ ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2021ನ್ನು**

ಏರ್ಪಡಿಸಲಾಗಿದೆ.

ಬಹುಮಾನಗಳ ಪ್ರಾಯೋಜಕರು :

- ಪ್ರಥಮ ಬಹುಮಾನ : ರೂ.10,000/- ಶ್ರೀ ಅಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ। ಶಾಂತಾ ಹಾಗೂ ದಿ। ಭುಜಂಗರಾಯರ ಸ್ಮರಣಾರ್ಥ
- ದ್ವಿತೀಯ ಬಹುಮಾನ : ರೂ.6,000/- ಶ್ರೀಮತಿ ಸುನಂದ ಸಿ.ಎಸ್.ರಾವ್, ಚಿಟ್ಪಾಡಿ
- ಸಮಾಧಾನಕರ ಬಹುಮಾನ : ಒಟ್ಟು ರೂ.4,000/- ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ। ಗಿರಿಜಮ್ಮ ಹಾಗೂ ದಿ। ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
- ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.3,000/-, ಶ್ರೀ ಬಿ. ಜಯರಾಮ ರಾವ್

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಕ್ರಿಕೆಟ್‌ಪಂದ್ಯಾಟ ನಡೆಯಲಿದೆ.**

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

ಆಸಕ್ತ ತಂಡಗಳು ಸಂಘದ ಕಾರ್ಯದರ್ಶಿ ಶ್ರೀ ಯು.ಅರವಿಂದ ಕುಮಾರ್ (9343560647), ಯುವವೇದಿಕೆಯ ಅಧ್ಯಕ್ಷರಾದ ಡಾ. ಸಂತೋಷ್ ರಾವ್ (9900411040), ಮೆನೇಜರ್ ಶ್ರೀ ಅಜಿತ್ ರಾವ್ (9448108920) ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 20-03-2021ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

- ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

## ಮಹಿಳಾ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ತಾ.21-03-2021ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ

ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು**

ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

# ಯುಗಾದಿ ಮರಳಿ ಬರುತಿದೆ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.

*ಯುಗ ಯುಗಾದಿ ಕಳೆದರೂ*
*ಯುಗಾದಿ ಮರಳಿ ಬರುತಿದೆ*
*ಹೊಸ ವರುಷಕೆ ಹೊಸ ಹರುಷವ*
*ಹೊಸತು ಹೊಸತು ತರುತಿದೆ*
*ಹೊಂಗೆ ಹೂವ ತೊಂಗಲಲಿ ಭೃಂಗದ*
*ಸಂಗೀತ ಕೇಳಿ ಮತ್ತೆ ಕೇಳಿ ಬರುತಿದೆ*
*ಬೇವಿನ ಕಹಿ ಬಾಳಿನಲ್ಲಿ ಹೂವಿನ*
*ನಸುಗಂಪು ಸೂಸಿ ಜೀವ ಕಳೆಯ ತರುತಿದೆ*
*ವರುಷಕೊಂದು ಹೊಸತು ಜನ್ಮ*
*ವರುಷಕೊಂದು ಹೊಸತು ನೆಲೆಯ*
*ಅಖಿಲ ಜೀವಜಾತಕೆ*
*ಒಂದೇ ಒಂದು ಜನ್ಮದಲ್ಲಿ ಒಂದೆ ಬಾಲ್ಯ*
*ಒಂದೆ ಹರಯ ನಮಗದಷ್ಟೆ ಏತಕೋ*
*ನಿದ್ದೆಗೊಮ್ಮೆ ಮರಣ ಎದ್ದ ಸಲ ನವೀನ ಜನನ*
*ನಮಗೆ ಏಕೆ ಬಾರದೋ*
*ಯುಗ ಯುಗಾದಿ ಕಳೆದರೂ........*

ಎಂದು ವರಕವಿ ದ.ರಾ.ಬೇಂದ್ರೆಯವರು ಯುಗಾದಿಯನ್ನು ಕುರಿತು ಬಣ್ಣಿಸಿದ ಈ ಕವಿತೆ ಸುಪ್ರಸಿದ್ಧವಾದುದು.



ಯುಗಾದಿ ಎಂದರೆ ಸೃಷ್ಟಿಯ ಪ್ರಾರಂಭ. ವರ್ಷದ ಮೊದಲ ದಿನ ಮತ್ತು ಅಂದು ಆಚರಿಸುವ ಹಬ್ಬ. ಯುಗಾದಿಯ ಅರ್ಥ ಯುಗದ ಆದಿ. ಯುಗಾದಿ ಎಂಬ ಶಬ್ದ ಸಂಸ್ಕೃತದ ‘ಯುಗ’ ಮತ್ತು ‘ಆದಿ’ ಎಂಬ ಎರಡು ಶಬ್ದಗಳಿಂದ ಕೂಡಿದೆ. ಯುಗವೆಂದರೆ ಸೃಷ್ಟಿಯ ಕಾಲಮಾನ. ಅರ್ಥಾತ್ ಹೊಸ ವರ್ಷ. ಆದಿ ಎಂದರೆ ಆರಂಭ. ಯುಗಾದಿ ತತ್ಸಮ ಪದವಾದರೆ ಉಗಾದಿ ತದ್ಭವ. ಯುಗಾದಿ ಹಬ್ಬವು ಪೌರಾಣಿಕ ಹಾಗೂ ಐತಿಹಾಸಿಕ ವಿಶೇಷತೆಗಳ ದಿನವಾಗಿದೆ. ಇದು ಬ್ರಹ್ಮದೇವನ ಸೃಷ್ಟಿಯ ದಿನ. ಚೈತ್ರಶುದ್ಧ ಪಾಡ್ಯದಂದು ಸೂರ್ಯೋದಯವಾಗುತ್ತಿರುವಾಗ ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದನೆಂದೂ, ಅಂದಿನಿಂದ ಕಾಲಗಣನೆಗಾಗಿ ಗ್ರಹ-ನಕ್ಷತ್ರ-ಮಾಸ-ಋತು ವರ್ಷ ಇವುಗಳನ್ನು ಏರ್ಪಡಿಸಿದನೆಂದೂ ವ್ರತಖಂಡದಲ್ಲೂ ಪುರಾಣಗಳಲ್ಲೂ ಉಲ್ಲೇಖವಿದೆ.

ವರಾಹಮಿಹಿರಾಚಾರ್ಯನು ವರ್ಷಾರಂಭವನ್ನು ಚೈತ್ರಮಾಸವೆಂದು ಹೇಳಿರುವನು. ಪಂಚಾಂಗ ಮತ್ತು ಶಾಸ್ತ್ರದ ಪ್ರಕಾರ ಶುಭದಿನ ಹಾಗೂ ಅತ್ಯಂತ ಶುಭಮುಹೂರ್ತದ ಮೂರುವರೆ ದಿನಗಳೆಂದರೆ ಯುಗಾದಿ, ವಿಜಯದಶಮಿ, ಬಲಿಪಾಡ್ಯಮಿ ಮತ್ತು ಅಕ್ಷಯತದಿಗೆ. ಅದರಲ್ಲಿ ಯುಗಾದಿ ಅತಿಶ್ರೇಷ್ಠ ಮುಹೂರ್ತ ಎಂದು ಭಾರತೀಯರು ನಂಬುತ್ತಾರೆ. ವರ್ಷದ ಶುಭದಿನವಾದ ಯುಗಾದಿ ಮಂಗಳಕಾರ್ಯವನ್ನು ಮಾಡಲು ಯೋಗ್ಯ ದಿನವೆಂದು ಹೇಳುವರು.

ದಕ್ಷಿಣ ಭಾರತವನ್ನು ಆಳಿದ ಶಾಲಿವಾಹನನು ಚೈತ್ರಶುದ್ಧ ಪಾಡ್ಯಮಿಯಂದು ಶಾಲಿವಾಹನ ರಾಜ ಸಿಂಹಾಸನಾರೂಢನಾದನು. ಆಗಿನಿಂದ ಶಾಲಿವಾಹನ ಶಕೆ ಆರಂಭವಾಯಿತೆಂದೂ ಹೇಳಲಾಗುತ್ತದೆ. ಹಿಂದುಗಳು ಶಾಲಿವಾಹನ ಶಕೆಯ ಸಂವತ್ಸರಗಳನ್ನಾಧರಿಸಿ ಆಯಾ ಸಂವತ್ಸರವನ್ನು ಚೈತ್ರಮಾಸದ ಪ್ರತಿಪದೆಯಿಂದ ಆರಂಭಿಸುವರು. ಯುಗಾದಿಯು ಚಂದ್ರಮಾನ ಸಂವತ್ಸರದ ಆರಂಭದ ದಿನ.

ವೇದಗಳ ಕಾಲದಿಂದಲೂ ಯುಗಾದಿಯ ಮಹಿಮೆ ಇದೆ. ಎಲ್ಲಾ ಶಾಸ್ತ್ರ ಗ್ರಂಥಗಳಲ್ಲಿ ಯುಗಾದಿಯನ್ನು ಕುರಿತು ಹೇಳಲಾಗಿದೆ. ಶ್ರೀರಾಮನು ರಾವಣನನ್ನು ಸಂಹರಿಸಿ ಬಂದಾಗ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಪಟ್ಟಾಭಿಷೇಕವಾದ ದಿನ. ಅಲ್ಲದೆ ಮಹಾಭಾರತದಲ್ಲಿ ಬರುವ ಚೇದಿರಾಜ್ಯದ ಅರಸು ವಸುವಿನ ಉಗ್ರ ತಪಸ್ಸಿಗೆ ಮೆಚ್ಚಿದ ಇಂದ್ರನು ವೈಜಯಂತಿ ಮಾಲೆಯನ್ನು ಅವನಿಗೆ ಕೊಟ್ಟು ಚಿನ್ನದ ಕಲಶವುಳ್ಳ ಚಕ್ರಾಧಿಪತ್ಯದ ಧ್ವಜವನ್ನು ರಾಜನ ತಲೆಯ ಮೇಲೆ ಇಟ್ಟಿರುವ ದಿನ. ಆದ್ದರಿಂದ ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ.



ಯುಗಾದಿಯನ್ನು ಚಂದ್ರಮಾನ-ಸೌರಮಾನ ಹೀಗೆ ಎರಡು ಬಗೆಯಲ್ಲಿ ಆಚರಿಸುವ ಪದ್ಧತಿಯಿದೆ. ಹಿಂದೂ ಧರ್ಮದ ವೇದಾಂಗ ಜ್ಯೋತಿಷ ಶಾಸ್ತ್ರದಿಂದ ನಿರ್ಣಯಗೊಳ್ಳುತ್ತದೆ. ಚಂದ್ರನ ಚಲನೆಯನ್ನಾಧರಿಸಿ, ದಿನಗಣನೆ ಮಾಡುವುದನ್ನು ಚಂದ್ರಮಾನ ಎನ್ನುತ್ತಾರೆ. ಸೂರ್ಯನ ಗತಿಯಿಂದ ಎಣಿಕೆ ಮಾಡುವುದನ್ನು ಸೌರಮಾನ ಎನ್ನುತ್ತಾರೆ. ದಕ್ಷಿಣ ಭಾರತೀಯರು ಚಂದ್ರಮಾನ ವನ್ನು ಅನುಸರಿಸಿ ಚೈತ್ರ ಶುದ್ಧ ಪಾಡ್ಯಮಿಯಂದು ಯುಗಾದಿ ಆಚರಿಸುತ್ತಿರುವರು. ತಮಿಳುನಾಡು, ಕೇರಳ ಮತ್ತು ಉತ್ತರಭಾರತದ ಕೆಲವು ಸ್ಥಳಗಳಲ್ಲಿ ಸೌರಮಾನ ಯುಗಾದಿ ಆಚರಿಸುತ್ತಾರೆ. ಕರ್ನಾಟಕದಲ್ಲಿ ಚಾಂದ್ರಮಾನ ಪದ್ಧತಿ ಮೊದಲಿನಿಂದ ರೂಢಿಯಲ್ಲಿದೆ. ಉತ್ತರ ಭಾರತದಲ್ಲಿ ಕಾರ್ತಿಕ ಶುದ್ಧ ಪಾಡ್ಯಮಿಯನ್ನು ಯುಗಾದಿಯೆನ್ನುವರು. ಈ ಹಬ್ಬವನ್ನು ಭಾರತದಲ್ಲಿ ಬೇರೆ ಬೇರೆ ಹೆಸರಿನಿಂದ ಆಚರಿಸುವರು. ಕರ್ನಾಟಕದಲ್ಲಿ ಯುಗಾದಿ, ಮಹಾರಾಷ್ಟ್ರದಲ್ಲಿ ‘ಗುಢಿಪಾಡವಾ’, ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ‘ಹೊಸ ವರ್ಷದ ಹಬ್ಬ’ ವೆಂದು, ಉತ್ತರಭಾರತದಲ್ಲಿ ‘ಬೈಸಾಖಿ’ ಎಂದು ಇದು ಆಚರಿಸಲ್ಪಡುತ್ತದೆ. ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಯುಗಾದಿಯ ದಿನ ಪ್ರತಿಯೊಂದು ಮನೆಯ ಮುಂದೆ ಗುಡಿಯನ್ನು ನಿಲ್ಲಿಸುವ ಪದ್ಧತಿಯಿದೆ. ಆದ್ದರಿಂದ ಯುಗಾದಿಯನ್ನು ‘ಗುಡಿಪಾಡ್ಯ’ ಎಂದು ಕರೆಯುತ್ತಾರೆ. ಗುಡಿ ಎಂದರೆ ಧ್ವಜ. ಒಂದು ಕೋಲಿನ ತುದಿಗೆ ರೇಷ್ಮೆ ಬಟ್ಟೆ ಏರಿಸುತ್ತಾರೆ. ಅದರ ಮೇಲೆ ಬೆಳ್ಳಿ ಅಥವಾ ಹಿತ್ತಾಳೆಯ ಸಣ್ಣ ಬಿಂದಿಗೆಯನ್ನು ಕಟ್ಟಿ ಬೇವು ಮತ್ತು ಮಾವಿನ ಎಲೆಗಳಿಂದ ಅಲಂಕರಿಸುತ್ತಾರೆ. ಮಹಾಭಾರತದಲ್ಲಿ ಇದರ ಪ್ರಸ್ತಾಪವಿದೆ.

ಭೂಮಿಯಿಂದ ನೋಡಿದಾಗ ಸೂರ್ಯ ಚಂದ್ರ, ಗ್ರಹಗಳು ನಕ್ಷತ್ರಮಂಡಲದಿಂದಾಗಿ ರಾಶಿಚಕ್ರದಲ್ಲಿ ದಿನೇ ದಿನೇ ಸ್ವಲ್ಪ ಸ್ವಲ್ಪವಾಗಿ ಸಂಚರಿಸಿದಂತೆ ಕಾಣುತ್ತೇವೆ. ವೇದಾಂಗ ಜ್ಯೋತಿಷದಂತೆ, ಮೊದಲ ನಕ್ಷತ್ರ ಅಶ್ವಿನಿ ಉತ್ತರಾರ್ಧಗೋಳದಲ್ಲಿ ಸಸ್ಯಗಳಲ್ಲಿ ಚಿಗುರು ಕಾಣುತ್ತದೆ. ಅಂದರೆ ಹೊಸ ಹುಟ್ಟು. ಆದ್ದರಿಂದ ಅಶ್ವಿನಿ ನಕ್ಷತ್ರಕ್ಕೆ ರವಿಯು ಪ್ರವೇಶಿಸುವ ಕಾಲವನ್ನು ಹೊಸವರ್ಷ ಎಂದು ಪರಿಗಣಿಸುತ್ತಾರೆ. ಇದೇ ಸೌರಮಾನ ಯುಗಾದಿ. ಸಾಮಾನ್ಯವಾಗಿ ಈಗ ಇದು ಎಪ್ರಿಲ್ 14 ಅಥವಾ 15ನೇ ತಾರೀಕಿಗೆ ಬೀಳುತ್ತದೆ. ಆದರೆ ಚಂದ್ರನ ಗತಿ ಅತಿವೇಗವಾದ್ದರಿಂದ ಪ್ರತಿ ಪ್ರದಕ್ಷಿಣೆಗೂ ಒಂದೊಂದು ತಿಂಗಳಾಗಿ ಹನ್ನೆರಡು ಪ್ರದಕ್ಷಿಣೆಗಳಿಗೆ ಸರಿಯಾಗಿ ಒಂದು ಚಾಂದ್ರಮಾನ ಸಂವತ್ಸರವಾಗುತ್ತದೆ. ರವಿಚಂದ್ರರ ಗತಿಯನ್ನವಲಂಬಿಸಿ 11 ರಿಂದ 13 ಪೂರ್ಣಿಮೆ/ಅಮಾವಾಸ್ಯೆಗಳಿಗೊಂದು ಚಾಂದ್ರಮಾನ ಯುಗಾದಿಯಾಗುತ್ತದೆ. ಈ ಯುಗಾದಿ ನಿರ್ಣಯದ ಹಿಂದೆ ವೇದಾಂಗ ಜ್ಯೋತಿಷದ ಮಹತ್ತರ ಸಾಧನೆಗಳೇ ಅಡಗಿವೆ. ಆದ್ದರಿಂದ ನಮ್ಮ ಪೂರ್ವಿಕರ ಖಗೋಳ ಗಣಿತದ ಅಪಾರ ಜ್ಞಾನ ವ್ಯಕ್ತವಾಗುತ್ತದೆ.

ಯುಗಾದಿಯ ಹೊಸತನವನ್ನು ಕುರಿತು ಹಾಡದ ಕವಿಗಳು ವಿರಳ. “ನಿನ್ನೆಗಳನು ನೆಲಕ್ಕೆ ಮೆಟ್ಟಿ, ನಾಳೆಗಳನ್ನು ತಲೆಗೆ ಕಟ್ಟಿ, ಕುಣಿದು ಹಾಡಿ ಕೈಯ ತಟ್ಟಿ ಬಂದಿತಿಂದು ಹೊಸದಿನ” ಎಂದು ಕವಿ ಆನಂದಕಂದರು ಹೊಸದಿನದ ಹೊಸತನವನ್ನು ಹಾಡಿದ್ದಾರೆ. ಯುಗಾದಿ ಎಂದರೆ ಹೊಸ ಸಂವತ್ಸರ. ಹೊಸ ಪಂಚಾಂಗ ಗೋಡೆ ಹಳೆಯದಾದರೂ ಅದಕ್ಕೆ ತೂಗುವ ಕ್ಯಾಲೆಂಡರ್ ಹೊಸದೇ. ಹೊಸ ಆಲೋಚನೆ, ಹೊಸತನ್ನು ಮಾಡುವ ಉತ್ಸಾಹ, ಈ ಹೊಸ ವರ್ಷದಿಂದ ಹೊಸತೇನೂ ಮಾಡಬೇಕೆಂಬ ಹಂಬಲ. ಒಳಗಿನ ಅಂತರಂಗ ಬದಲಾಗಬೇಕು. ಹೊಸ ಪರಿವರ್ತನೆ ಮೂಡಿಬರಬೇಕು. ಅದೂ ಬದಲಾವಣೆಯ ಯುಗಾದಿ. ಆದ್ದರಿಂದ ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ.




ವಸಂತ ಮಾಸವು ಪ್ರಕೃತಿಯಲ್ಲಿ ಹೊಸತಾಗಿ ಹಸಿರು ಚಿಗುರುವ, ಮಲ್ಲಿಗೆ ಅರಳಿ ಘಮಘಮಿಸುವ, ಮಾಮರವು ಸುಗ್ಗಿಯಾಗುವ ಸಂಭ್ರಮದ ವಾತಾವರಣವನ್ನು ನಿರ್ಮಿಸುತ್ತದೆ. ವಸಂತರಾಜನ ಬರವಿಗಾಗಿ ಕೋಗಿಲೆಗಳು ಸ್ವಾಗತ ಹೇಳುತ್ತವೆ. ಪಂಡಿತವಕ್ಕಿಗಳು ಸ್ತುತಿ ಪಾಠ ಹೇಳುತ್ತವೆ. ದುಂಬಿಗಳು ಭಟ್ಟಂಗಿಗಳಾಗಿ ಝೇಂಕರಿಸುತ್ತವೆ. ಮತ್ತೆ ಮತ್ತೆ ಝೇಂಕರಿಸುತ್ತವೆ. ಮಾಮರಗಳು ತಳಿರು-ತೋರಣ ಕಟ್ಟಿ ಶುಭಾಗಮನವನ್ನು ಕೋರುತ್ತವೆ. ವಸಂತರಾಜನ ಆಗಮನವನ್ನು ಪಂಪನಿಂದ ಕುವೆಂಪುವರೆಗೆ ವಿಧವಿಧವಾಗಿ ವರ್ಣಿಸಿದ್ದಾರೆ. ಯುಗಾದಿ ಬಂತೆಂದರೆ ಎಲ್ಲೆಡೆಯಲ್ಲಿ ಸಂತೋಷವೇ ಸಂತೋಷ. ಸಂಭ್ರಮವೇ ಸಂಭ್ರಮ ತುಳುಕಾಡುತ್ತದೆ. ಚೈತ್ರಮಾಸದಿಂದ ವಸಂತಋತು ಶುರುವಾಗುತ್ತದೆ. ವನಗಳೆಲ್ಲ, ತೋಟಗಳೆಲ್ಲ, ಚಿಗುರಿ ಹೂಬಿಟ್ಟು ಯುಗಾದಿಯ ಹರ್ಷವನ್ನು ಬೀರುವವು. ಎಲ್ಲಿ ನೋಡಿದರಲ್ಲಿ ಮರಗಿಡ ಬಳ್ಳಿಗಳು ಹಸಿರಾಗಿ ನಳನಳಿಸುತ್ತಿರುವುದು. ಆದ್ದರಿಂದ ಹೊಂಗೆಹೂವ ತೊಂಗಲಲಿ



ಭೃಂಗದ ಸಂಗೀತ ಕೇಳಿ ಮತ್ತೆ ಕೇಳಿ ಬರುತಿದೆ.

ಯುಗಾದಿ ಬೇವುಬೆಲ್ಲಗಳಿಂದ ಸಂಕೇತಿಸಲ್ಪಡುತ್ತದೆ. ಹಿಂದಿನ ಬೇವನ್ನು ಜೀರ್ಣಿಸಿಕೊಂಡು ಇಂದಿನ ಬೆಲ್ಲವನ್ನು ಸವಿಯಬೇಕು. ಯುಗಾದಿಯ ದಿನದಂದು ಸುಖದ ಸಂಕೇತವಾದ ಬೆಲ್ಲವನ್ನು ಮತ್ತು ಕಷ್ಟದ ಸಂಕೇತವಾದ ಬೇವನ್ನು ಸಮನಾಗಿ ಸ್ವೀಕರಿಸುತ್ತಾರೆ. ತಿಂದ ಮೇಲೆ ಬೆಲ್ಲವು ಹೊಟ್ಟೆಯೊಳಗೆ ಶಾಖವನ್ನು ಉಂಟು ಮಾಡಿದರೆ ಬೇವು ಆ ಶಾಖದ ಶಮನಕಾರಿ. ಜೀವನದ ಸಿಹಿ-ಕಹಿಗಳೆರಡನ್ನೂ ಪಡೆಯಬೇಕೆಂದು ನೆನಪಿಸಲು ಬೇವು-ಬೆಲ್ಲಗಳ ಮಿಶ್ರಣವನ್ನು ತಿನ್ನಲಾಗುತ್ತದೆ. ಹುಣಿಸೇಹಣ್ಣು, ಬೆಲ್ಲ, ಮಾವಿನಕಾಯಿ, ಉಪ್ಪು, ಮೆಣಸು, ಬೇವು ಇತ್ಯಾದಿಗಳ ಮಿಶ್ರಣಮಾಡಿ ಯುಗಾದಿ ‘ಪಚ್ಚಡಿ’ ಎಂಬ ಹೆಸರಿನ ಪದಾರ್ಥವನ್ನು ಸೇವಿಸುತ್ತಾರೆ.

(3ನೇ ಪುಟಕ್ಕೆ...)

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

ಮನೆಯ ಹೆಂಗಸರು ಹೊಸದಾಗಿ ಬರುವ ಮಾವಿನಕಾಯಿಯಿಂದ ಉಪ್ಪಿನಕಾಯಿಯನ್ನು ಮಾಡುತಾರೆ. ಬೇವು-ಬೆಲ್ಲವು, ಸುಖ-ದುಃಖ, ರಾತ್ರಿ-ಹಗೆಲು ಇವುಗಳ ಸಂಕೇತಗಳಾಗಿವೆ. ಮಾನವರ ಜೀವನದಲ್ಲಿ ಸುಖದುಃಖಗಳು ಅವಿಭಾಜ್ಯ ಸಂಗತಿಗಳು. ಜೀವನ ಕಷ್ಟ-ಸುಖ, ನೋವು-ನಲಿವುಗಳ ಸಮ್ಮಿಶ್ರಣವಾಗಿದೆ. ಇವೆರಡೂ ಒಟ್ಟಿಗೆ ಇರುವವು. ಇವೆಲ್ಲವುಗಳೊಂದಿಗೆ ಸಮತೋಲನ ಕಾಯ್ದುಕೊಂಡೇ ಮನುಷ್ಯ ಬದುಕಬೇಕು. ಎರಡನ್ನೂ ಸಮದೃಷ್ಟಿಯಿಂದ ಸವಿಯುವುದನ್ನು ಕಲಿಯಲೆಂದೇ ಯುಗಾದಿಯಂದು ಬೇವು-ಬೆಲ್ಲವನ್ನು ತಿನ್ನಿಸುವರು. ನಾವು ಬೇವಿನ ಸಮಾನವಾದ ದುಃಖ, ಅಶಾಂತಿಯ ಪ್ರಪಂಚದಲ್ಲಿದ್ದರೂ ಬೆಲ್ಲದ ಸಮಾನವಾದ ಶಾಂತಿ ಸುಖ, ಆತ್ಮೀಯತೆ ಮತ್ತು ಸ್ನೇಹದ ಅನುಭವ ಮಾಡುವುದು. ಆದ್ದರಿಂದ ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗಂಪು ಸೂಸಿ ಜೀವಕಳೆಯ ತರುತಿದೆ.



ಯುಗಾದಿ ದಿನ ಮನೆಗಳ ಮುಂಬಾಗಿಲಿಗೆ ಮತ್ತು ದೇವರ ಮನೆಯ ಬಾಗಿಲಿಗೆ ತಳಿರು ತೋರಣವನ್ನು ಕಟ್ಟುತ್ತಾರೆ. ಅಂದರೆ ಎಳೆಯ ಹಸಿರು ಮಾವಿನೆಲೆ ಮಧ್ಯೆ ಮಧ್ಯೆ ಬೇವಿನ ಎಲೆ ಹೂಗಳ ಗೊಂಚಲುಗಳಿಂದ ಶೃಂಗರಿಸುವರು. ಮನೆಯ ಮುಂಬಾಗಿಲ ಮುಂದೆ ವಿವಿಧ ಬಣ್ಣದ ರಂಗೋಲಿಯನ್ನಿಡುವರು. ಆ ದಿನ ಮುಂಜಾನೆ ಬೇವು ಮಿಶ್ರಿತ ನೀರಿನಿಂದ ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ ದೇವರನ್ನು ಪೂಜಿಸುತ್ತಾರೆ.

ಪುಣ್ಯಾಹ ಮಂತ್ರಗಳನ್ನು ಉಚ್ಚರಿಸಿ ಮಾವಿನ ಎಲೆಯಿಂದ ಮನೆಯ ಎಲ್ಲ ಕಡೆ ಕಳಶದ ನೀರನ್ನು ಸಿಂಪಡಿಸುತ್ತಾರೆ. ಮನೆಯವರೆಲ್ಲರೂ ಸಂತೋಷದಿಂದ ಭಜಿಸಿ ಆನಂದದಿಂದ ಹಾಡಿ ನಲಿಯುತ್ತಾರೆ. ಕೆಲವರು ಸೂರ್ಯ ನಮಸ್ಕಾರ, ಪಂಚಾಂಗದ ಪೂಜೆ ಮಾಡುತಾರೆ. ಪಂಚಾಂಗವನ್ನು ಕೇಳುವುದರಿಂದ ಮಾನವನ ಆಯುಷ್ಯ ಹೆಚ್ಚಾಗುತ್ತದೆ. ರೋಗ, ಪಾಪಗಳು ನಾಶವಾಗಿ ಗಂಗಾಸ್ನಾನ ಮಾಡಿದ ಫಲ ಸಿಗುತ್ತದೆ. ನವಗ್ರಹ ಪೂಜೆಗಳನ್ನು ಮಾಡುತ್ತಾರೆ. ಹಲವೆಡೆ ದಾನ ಮಾಡುವ ಸಂಪ್ರದಾಯ ವಿರುತ್ತದೆ. ಆ ದಿನ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಕರಾವಳಿಯ ಸೌರಮಾನ ಯುಗಾದಿಯ ವಿಶೇಷತೆ ಖಣಿ ಇಡುವುದು. ಬಾಳೆಎಲೆ, ತಟ್ಟೆಯಲ್ಲಿ ಅಕ್ಕಿ ಹಾಕಿ ಅದರ ಮೇಲೆ ತೆಂಗಿನಕಾಯಿ, ಸೌತೆಕಾಯಿ, ರವಿಕೆ ಕಣ, ಹೊಸಬಟ್ಟೆ, ಚಿನ್ನ, ಭತ್ತದ ತೆನೆ, ಹಣ್ಣು, ದೇವರ ಪ್ರತಿಮೆ ಅದರ ಮುಂದೆ ಒಂದು ಕನ್ನಡಿ ಇಡುತ್ತಾರೆ. ದೇವರ ಪ್ರತಿಮೆ ಹಾಗೂ ತಟ್ಟೆಯಲ್ಲಿಟ್ಟ ವಸ್ತುಗಳು ಕಾಣುವ ಹಾಗೆ ಕನ್ನಡಿಯ ಎದುರು ಇಡುತ್ತಾರೆ, ಯುಗಾದಿ ಹಬ್ಬದಂದು ಬೆಳಿಗ್ಗೆ ಬೇಗ ಎದ್ದು ದೇವರ ದೀಪ ಹಚ್ಚಿ ಖಣಿಯಲ್ಲಿನ ಕನ್ನಡಿಯಲ್ಲಿ ದೇವರ ದರ್ಶನ ಪಡೆಯುವುದು ಅಂದಿನ ವಿಶೇಷ. ಕೆಲವೆಡೆ ಒಬ್ಬಟ್ಟು ಅಥವಾ ಹೋಳಿಗೆ ತಯಾರಿಸಿ ಇಡುವರು. ಸತ್ಕಾರ್ಯಗಳಿಗೋಸ್ಕರ ನಮ್ಮನ್ನು ತೊಡಗಿಸಿಕೊಳ್ಳುವ ದಿನ. ಸುಖ ನೀಡುವಂತೆ ಕಷ್ಟ ನಿವಾರಿಸುವಂತೆ ದೇವರಲ್ಲಿ ಕೇಳಿಕೊಳ್ಳುವ




ದಿವಸ. ಈ ಯುಗಾದಿಯ ಸಮಯದಲ್ಲಿ ಶಿವನು ಪ್ರಜಾಪಿತ ಬ್ರಹ್ಮದೇವರ ಶರೀರದಲ್ಲಿ ಪ್ರವೇಶ ಮಾಡಿ ಹೊಸಸೃಷ್ಟಿಯ ಸ್ಥಾಪನೆ ಮಾಡುವನು. ವರುಷಕೊಂದು ಹೊಸತು ಜನ್ಮ ವರುಷಕೊಂದು ಹೊಸತು ನೆಲೆಯು ಅಖಿಲ ಜೀವ ಜಾತಕೆ, ಒಂದೇ ಒಂದು ಜನ್ಮದಲ್ಲಿ ಒಂದೇ ಬಾಲ್ಯ, ಒಂದೇ ಹರೆಯ ನಮಗದಷ್ಟೇ ಏತಕೋ.

ಬೇವಿನ ಎಲೆಯೂ ಮಾನವನ ಆರೋಗ್ಯಕ್ಕೆ ಸಹಕಾರಿಯಾಗುವುದು. ಬೇವು-ಬೆಲ್ಲದ ಮಿಶ್ರಣವನ್ನು ಸೇವಿಸುವಾಗ ಹೇಳುವ ಒಂದು ಶ್ಲೋಕ ಹೀಗಿದೆ :





**ಶತಾಯುಃ ವಜ್ರದೇಹಾಯ ಸರ್ವಸಂಪತ್ಕರಾಯ ಚ।**
**ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ॥**

ಇದರ ಅರ್ಥ ಹೀಗಿದೆ : ನೂರು ವರುಷಗಳ ಆಯುಷ್ಯ, ಸದೃಢ ಆರೋಗ್ಯ, ಸಕಲ ಸಂಪತ್ತುಗಳ ಪ್ರಾಪ್ತಿಗಾಗಿಯೂ ಸಕಲ ಅನಿಷ್ಟ ನಿವಾರಣೆಗಾಗಿಯೂ ಬೇವು ಬೆಲ್ಲ ಸೇವನೆ ಮಾಡುತ್ತೇನೆ.

ಜೀವನವೆಲ್ಲವೂ ಬೇವು ಬೆಲ್ಲ! ಎರಡೂ ಸವಿವವನೇ ಕವಿ ಮಲ್ಲ ಎಂದು ಕುವೆಂಪು ವರ್ಣಿಸಿದ್ದಾರೆ. ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ ಎಂದು ದ.ರಾ.ಬೇಂದ್ರೆಯವರು ತಮ್ಮ ಯುಗಾದಿ ಕವನದಲ್ಲಿ ನುಡಿದುದು ಬಹಳ ಅರ್ಥವತ್ತಾಗಿದೆ.

# ಕಣ್ಣಿಗೆ ಕೈ ಹಾಕಿದಂತೆ

ಲೇಖಕಿ : ರಾಜೇಶ್ವರಿ ಕುಮಾರ್ ರಾವ್

"ಥೇ ನಾನೇನೂ ಸ್ನೇಹಿತಾಂತ ಸ್ವಲ್ಪ ಸಲಿಗೆಯಿಂದ, ಅರ್ಜೆಂಟಾಗಿ ಊರಿಗೆ ಹೋಗ್ಬೇಕು, ಎರಡು ದಿನದ ಮಟ್ಟಿಗೆ ನಿನ್ನ ಕಾರು ಕೊಡ್ತೀಯಂತ ಸಹೋದ್ಯೋಗಿ ಸುಬ್ಬುವನ್ನು ಕೇಳಿದರೆ ಹೇಗೆ ಕಣ್ಣಿಗೆ ಕೈ ಹಾಕಿದ ಹಾಗೆ ಮಾತಾಡಿದ ಗೊತ್ತಾ?" ನಾನು ಬೇಸರದಿಂದ ಹೇಳಿದ ಮಾತು ಮುಂಬಯಿಯಲ್ಲಿ ಬೆಳೆದ ನನ್ನ ಗೆಳೆಯ ಶ್ರೀಧರನಿಗೆ ಅರ್ಥವೇ ಆಗಲಿಲ್ಲ.

"ಅಲ್ಲ ಬ್ರದರ್, ಕಾರು ಕೊಡಲು ಇಷ್ಟವಿಲ್ಲದಿದ್ದರೆ ಏನೋ ನೆವ ಹೇಳಬಹುದಿತ್ತು. ಅದು ಬಿಟ್ಟು ಕಣ್ಣಿಗೇಕೆ ಕೈಹಾಕಿದ?" ಅವನ ಗಾಬರಿಯ ಮಾತು ಕೇಳಿ ನನ್ನ ಸಿಟ್ಟು ಮಾಯವಾಗಿ ನಗು ಬಂತು. "ಕಣ್ಣಿಗೆ ಕೈ ಹಾಕಲಿಲ್ಲ ಮಾರಾಯ, ಅದೊಂದು ಸೂಚ್ಯವಾಗಿ ಹೇಳುವ ಮಾತು. ಕಣ್ಣಿಗೆ ಕೈ ಹಾಕಿದರೆ ಎಷ್ಟು ನೋವಾಗ ಬಹುದೋ, ಒರಟು ಮಾತುಗಳಿಂದ ಮನಸ್ಸು ಅಷ್ಟೇ ಘಾಸಿಗೊಳ್ಳುತ್ತದೆ. ಆದ್ದರಿಂದ ಆಡುವ ಮಾತನ್ನು ನಯವಾಗಿ, ಮನಸ್ಸಿಗೆ ನೋವಾಗದಂತೆ ಹೇಳಬೇಕು. ಅದು ಬಿಟ್ಟು ಫಟ್ಟಂತ ನಿಷ್ಠುರವಾಗಿ ಹೇಳಿಬಿಟ್ಟರೆ ತುಂಬಾ ಬೇಸರವಾಗುತ್ತದೆ ಅಲ್ವಾ?" ತಲೆಯಾಡಿಸಿದ ಗೆಳೆಯ ಕುತೂಹಲದಿಂದ ಕೇಳಿದ, "ಏನೆಂದು ಹೇಳಿದರು? ನಾನು ಕೇಳಬಹುದೇ?" ಇಷ್ಟವಿಲ್ಲದಿದ್ದರೂ ಹೇಳಬೇಕಾಯ್ತು. "ಕಾರೇನು ಪುಕ್ಸಟ್ಟೆಗೆ ಬರುತ್ತದಾ? ಲಕ್ಷಗಟ್ಟಲೆ ಕೊಟ್ಟು ತೆಗೆದುಕೊಂಡ ಕಾರು, ನೀನು ಎಲ್ಲೋ ಗುದ್ದಿಬಿಟ್ಟು ಏನಾದ್ರೂ ಅನಾಹುತ ಮಾಡಿದ್ರೆ ನನ್ನ ತಲೆಗೆ ಬರುತ್ತದೆ" ಎಂದ. "ಅವನಿಗೆ ಕಾರು ಕೊಡಲು ಇಷ್ಟವಿಲ್ಲದಿದ್ದರೆ ಏನಾದರೂ ಸಬೂಬು ಹೇಳಬಹುದಿತ್ತು. ಅಥವಾ ಸ್ಪಷ್ಟವಾಗಿ ಕೊಡಲಾಗುವುದಿಲ್ಲ, ಬೇರೆನಾದರೂ ವ್ಯವಸ್ಥೆ ಮಾಡಿಕೋ ಅನ್ನಬಹುದಿತ್ತು. ಅದು ಬಿಟ್ಟು ಕಾರಿನ ಬೆಲೆ, ಅನಾಹುತವಾಗಬಹುದೆಂಬ ಅಪಶಕುನದ ಮಾತು ಬೇಕಿತ್ತೇ?" ಎಂದಾಗ ಶ್ರೀಧರನಿಗೆ ಇದೊಂದು ನುಡಿಮುತ್ತು ಎಂದು ಅರ್ಥವಾಗುತ್ತದೆ. ಕಣ್ಣು ಅತ್ಯಂತ ಸೂಕ್ಷ್ಮವಾದ ಭಾಗ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಕಣ್ಣೇಗೇನಾದರೂ ಊನವಾದರೆ ಬದುಕೇ ಅಂಧಕಾರದಲ್ಲಿ ಮುಳುಗಿದಂತೆ ಹಾಗೇ ಮನಸ್ಸು ಕೂಡಾ ಉದ್ದೇಶಪೂರ್ವಕವಾಗಿ ಅವಮಾನ ಮಾಡಿದರೆ, ಆ ಗಾಯ ಹಾಗೇ ಸುಪ್ತ ಮನಸ್ಸಿನಲ್ಲಿ ಉಳಿದುಹೋಗುತ್ತದೆ. ಮಾತೇ ಮಾಣಿಕ್ಯ, ಮುತ್ತು ಒಡೆದರೆ ಹೋಯಿತು, ಮಾತು ಆಡಿದರೆ ಮುಗಿಯಿತು. ಈ ಉಕ್ತಿಗಳೆಲ್ಲಾ ಮಾತಿಗೆ ಇರುವ ಬೆಲೆಯನ್ನು ಎತ್ತಿ ಹಿಡಿಯುತ್ತವೆ. ಎಲುಬಿಲ್ಲದ ನಾಲಿಗೆಗೆ ಮೂವತ್ತೆರಡು ಹಲ್ಲುಗಳ ಕಾವಲು, ನಾಲಿಗೆ ಎರಡಲುಗಿನ ಕತ್ತಿಯಂತೆ ಮಾತೆಂಬ ಪ್ರಬಲ ಅಸ್ತ್ರವನ್ನು ಬಳಸುವಾಗ ಎಚ್ಚರ ವಹಿಸಬೇಕಲ್ಲವೇ? ಎಂದಿಗೂ ಕಣ್ಣಿಗೆ ಕೈ ಹಾಕಿದಂತೆ ಮಾತನಾಡಬಾರದು ಏನಂತೀರಿ?

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.31-03-2021 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.03-04-2021** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

**ತಾ.18-03-2021** ಮತ್ತು **ತಾ.02-04-2021** ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14-03-2021 | ಮೀನ ಸಂಕ್ರಮಣ, ಶಿಶಿರ ಋತು, ಫಾಲ್ಗುಣ ಮಾಸದ ಶುಕ್ಲಪಕ್ಷಾರಂಭ, ಕುಂಜಿಬೆಟ್ಟು ಶ್ರೀಶಾರದಾ ದೇವಿಯ ಪ್ರತಿಷ್ಠಾ ಮಹೋತ್ಸವ, | 31-03-2021 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.25 |
| | | 07-04-2021 | ಸರ್ವೈಕಾದಶಿ |
| | | 12-04-2021 | ಅಮಾವಾಸ್ಯೆ |
| 15-03-2021 | ಉಡುಪಿ ಶ್ರೀ ಅನಂತೇಶ್ವರ ದೇವರ ರಥೋತ್ಸವ | 13-04-2021 | ಚಾಂದ್ರಯುಗಾದಿ, ಮೇಷ ಸಂಕ್ರಮಣ, ಪ್ಲವನಾಮ ಸಂವತ್ಸರದ ಆರಂಭ, ವಸಂತ ಋತು, ಚೈತ್ರಮಾಸದ ಶುಕ್ಲ ಪಕ್ಷಾರಂಭ, ಕಿರುನವರಾತ್ರಿ ಆರಂಭ |
| 21-03-2021 | ಶ್ರೀಶಾರದಾ ಟ್ರೋಫಿ ಕ್ರಿಕೆಟ್‌ಪಂದ್ಯಾಟ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳು | | |
| 25-03-2021 | ಸರ್ವೈಕಾದಶಿ | | |
| 28-03-2021 | ಹೋಲಿ ಹುಣ್ಣಿಮೆ, ಹೋಲಿಕಾ ಕಾಮದಹನ, ಹೋಲಿಹಬ್ಬ | 14-04-2021 | ಸೌರಯುಗಾದಿ (ವಿಷು), ಸೌರಪ್ಲವ ಸಂವತ್ಸರ ಆರಂಭ |
| 29-03-2021 | ಶಿಶಿರ ಋತು, ಫಾಲ್ಗುಣ ಮಾಸದ ಕೃಷ್ಣಪಕ್ಷಾರಂಭ, | 21-04-2021 | ರಾಮನವಮಿ, ಶುಕ್ರೋದಯ (ಶುಕ್ರ ಮೌಢ್ಯ ಅಂತ್ಯ) |

Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.






**RAJESH POWER PRESS**
**PRINTERS & PUBLISHERS**
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ನಿಧನ

### ಶ್ರೀಮತಿ ಕುಸುಮಾ ರಾವ್

ದಿ। ಎರ್ಮಾಳ್ ಭಾಸ್ಕರ್ ರಾವ್ ಅವರ ಪತ್ನಿ ಶ್ರೀಮತಿ ಕುಸುಮಾ ರಾವ್ ತಾ.11.02.2021 ರಂದು ಉಡುಪಿ ಇಂದ್ರಾಳಿ ಮನೆಯಲ್ಲಿ ನಿಧನರಾದರು. ಇವರು ಐವರು ಪುತ್ರಿಯರನ್ನು ಅಗಲಿದ್ದಾರೆ.

**** ****

### ಶ್ರೀಮತಿ ವರಲಕ್ಷ್ಮೀ ಶಂಕರನಾರಾಯಣ ರಾವ್

ಶ್ರೀಮತಿ ವರಲಕ್ಷ್ಮೀ ಶಂಕರನಾರಾಯಣ ರಾವ್ (61) ಇವರು ತಾ.08.02.2021 ರಂದು ಚಾರ್ಮಾಡಿಯ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

**** ****

### ಶ್ರೀಮತಿ ರಮಾ ರಾವ್

ದಿ। ಪಡುಬಿದ್ರೆ ನಾಗೇಶ್ ರಾವ್‌ರವರ ಪತ್ನಿ ಶ್ರೀಮತಿ ರಮಾ ರಾವ್ (84) ತಾ.06.02.2021ರಂದು ನಿಧನರಾಗಿದ್ದಾರೆ. ಇವರು ಮೂವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

**** ****

### ಶ್ರೀ ಮಾರ್ಪಳ್ಳಿ ರಮಾನಂದ ರಾವ್

ಶ್ರೀ ಮಾರ್ಪಳ್ಳಿ ರಮಾನಂದ ರಾವ್ (82) ಅವರು ತಾ.13.02.2021 ರಂದು ಬೆಂಗಳೂರಿನಲ್ಲಿ ನಿಧನರಾದರು.

**** ****

### ಶ್ರೀಮತಿ ಪದ್ಮಾ ಶಾಸ್ತ್ರಿ

ದಿ। ನಂದಿಕೂರು ವಾಸುದೇವ ಶಾಸ್ತ್ರಿ ಅವರ ಪತ್ನಿ, ಡಾ। ಸಂದೀಪ್‌ಶಾಸ್ತ್ರಿ ಅವರ ಶ್ರೀಮತಿ ತಾಯಿ ಪದ್ಮಾ ಶಾಸ್ತ್ರಿ (88) ತಾ.18.02.2021 ರಂದು ಬೆಂಗಳೂರಿನಲ್ಲಿ ನಿಧನರಾದರು.

### ಶ್ರೀ ಬೆಳ್ಳರ್ಪಾಡಿ ಗೋಪಾಲಕೃಷ್ಣ ರಾವ್

ಶ್ರೀ ಬೆಳ್ಳರ್ಪಾಡಿ ಗೋಪಾಲಕೃಷ್ಣ ರಾವ್ (68) ತಾ.16.02.2021ರಂದು ಮೈಸೂರಿನಲ್ಲಿ ನಿಧನರಾದರು.

**** ****

### ಶ್ರೀ ರಾಮ ರಾವ್

ಶ್ರೀ ಚಾರ ನಟ್ಟೋಜ ರಾಮ ರಾವ್ ಇವರು ತಾ.07.03.2021 ರಂದು ನಿಧನರಾದರು. ಇವರಿಗೆ 84 ವರ್ಷ ಪ್ರಾಯವಾಗಿತ್ತು.

**** ****

### ಶ್ರೀ ಶುಂಟಿಪಾಡಿ ಅನಿಲರಾವ್

ಶ್ರೀ ಶುಂಟಿಪಾಡಿ ಅನಿಲರಾವ್ ಇವರು ತಾ.02.03.2021 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 74 ವರ್ಷ ಪ್ರಾಯವಾಗಿತ್ತು.

**** ****

### ಶ್ರೀಮತಿ ನಾಗವೇಣಿ

ಮಂಗಳೂರು ನಿವಾಸಿ ದಿ। ಬೆಳ್ಳೆಗುಂಡಿ ಸುಬ್ರಾಯ ಹೆಬ್ಬಾರರ ಪತ್ನಿ ಶ್ರೀಮತಿ ನಾಗವೇಣಿ ತಾ.23.02.2021 ರಂದು ನಿಧನರಾದರು.

**** ****

### ಶ್ರೀಮತಿ ಯಶೋಧಮ್ಮ

ಬೆಂಗಳೂರು ನಿವಾಸಿ ಕಟೀಲು ಸುಬ್ರಾಯ ಶಾನುಭಾಗ್‌ರ ಪತ್ನಿ ಶ್ರೀಮತಿ ಯಶೋಧಮ್ಮ ತಾ.27.02.2021 ರಂದು ನಿಧನರಾದರು. ಅವರಿಗೆ 85 ವರ್ಷ ಪ್ರಾಯವಾಗಿತ್ತು.

## ಬ್ರಹ್ಮೋಪದೇಶ

### ಚಿ। ಪ್ರಣವ್

ಶ್ರೀಯುತ ಮಾರ್ಪಳ್ಳಿ ಚಂದ್ರಶೇಖರ್ ಮತ್ತು ಶ್ರೀಮತಿ ಲಲತಾರವರ ಪೌತ್ರ ಹಾಗೂ ಶ್ರೀಮತಿ ಕೀರ್ತನಾ ಮತ್ತು ಶ್ರೀ ಉಮೇಶ್ ದಂಪತಿಗಳ ಪುತ್ರ ಚಿ। ಪ್ರಣವ್‌ಗೆ ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ 15.02.2021ರಂದು ಬ್ರಹ್ಮೋಪದೇಶ ನೀಡಲಾಯಿತು.

### ಚಿ। ಅನಂತಕೃಷ್ಣ

ಶ್ರೀಯುತ ಮಾರ್ಪಳ್ಳಿ ಸುಬ್ರಹ್ಮಣ್ಯ ಮತ್ತು ಶ್ರೀಮತಿ ಪುಷ್ಪಾರವರ ಪೌತ್ರ ಹಾಗೂ ಶ್ರೀ ಗಿರೀಶ್ ಮತ್ತು ಶ್ರೀಮತಿ ಚೈತ್ರ ದಂಪತಿಗಳ ಪುತ್ರ ಚಿ। ಅನಂತಕೃಷ್ಣನಿಗೆ ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಕಲ್ಯಾಣ ಮಂಟಪದಲ್ಲಿ 21.02.2021ರಂದು ಬ್ರಹ್ಮೋಪದೇಶ ನೀಡಲಾಯಿತು.

## ಶುಭ ವಿವಾಹ

ಶ್ರೀ ಚಂದ್ರಶೇಖರ ರಾವ್ ಹಾಗೂ ಶ್ರೀಮತಿ ಕವಿತಾ ದಂಪತಿಗಳ ಪುತ್ರ **ಚಿ। ಚೇತನ್** ಮತ್ತು ಶ್ರೀ ಪ್ರಕಾಶ್ ರಾವ್ ಹಾಗೂ ಶ್ರೀಮತಿ ಶ್ರೀಲತಾ ದಂಪತಿಗಳ ಪುತ್ರಿ **ಚಿ। ಸೌ। ದಿಶಾ ರಾವ್** ಇವರ ವಿವಾಹವು ಉಡುಪಿಯ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ 17.02.2021 ರಂದು ನಡೆಯಿತು.

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಯಾಟಿಗೆ ಆಡಳಿತ ಮಂಡಳಿ ಆಯ್ಕೆ



ಎಂ.ಸದಾನಂದ ರಾವ್



ಯು.ಅರವಿಂದ ಕುಮಾರ್

ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಯಾಟಿ, ಉಡುಪಿ ಇದರ ಅಧ್ಯಕ್ಷರಾಗಿ ಶ್ರೀ ಎಂ.ಸದಾನಂದ ರಾವ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಯು.ಅರವಿಂದ ಕುಮಾರ್‌ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿಯ ಸದಸ್ಯರಾಗಿ ಶ್ರೀ ಯು.ಪ್ರಫುಲ್ಲಚಂದ್ರರಾವ್, ಶ್ರೀ ಕೆ.ಗಣೇಶ್ ರಾವ್, ಶ್ರೀ ವೈ.ವಿಠಲರಾವ್, ಶ್ರೀ ಬಿ.ಜಯರಾಮ ರಾವ್, ಶ್ರೀ ಬಿ. ಕೃಷ್ಣಮೂರ್ತಿ ರಾವ್, ಶ್ರೀ ವೈ.ಮೋಹನ್ ರಾವ್, ಶ್ರೀ ಎಂ.ಪದ್ಮನಾಭ ರಾವ್, ಶ್ರೀಮತಿ ಹರಿಣಾಕ್ಷಿ.ಎನ್.ರಾವ್, ಶ್ರೀಮತಿ ವೇದಾವತಿ ಡಿ.ರಾವ್, ಶ್ರೀ ಕೃಷ್ಣಕುಮಾರ್ ರಾವ್ ಮಟ್ಟುರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀ ಅರುಣ್ ಕುಮಾರ್ ಎಸ್.ವಿ.ರವರು ಚುನಾವಣಾ ರಿಟರ್ನಿಂಗ್ ಆಫೀಸರ್ ಆಗಿ ಕಾರ್ಯನಿರ್ವಹಿಸಿದರು.




ಎಮ್. ದೇವಾನಂದ್ ಭಟ್ Cell : 9845644556

ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)

ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655


## ಏಪ್ರಿಲ್ ತಿಂಗಳ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದ ಶಾಶ್ವತ ಸೇವಾಕರ್ತರ ವಿವರ

1. ಎ.ಸಂಜೀವ ರಾವ್, ಅಡೂರು, ಕಾಸರಗೋಡು
2. ಪಿ. ಪ್ರಭಾಕರ್ ರಾವ್, ಸಾಸ್ತಾನ
3. ಸ್ವಾತಿ ಸುರೇಶ್ ರಾವ್, ಯು.ಎ.ಇ.
4. ಶಾಂತಿ ಎಂ.ಕಾಮತ್, ಮೂಡುಬಿದ್ರೆ
5. ಪಿ. ಚಂದ್ರಶೇಖರ್ ರಾವ್, ಕೊಡವೂರು
6. ಯು.ಅರವಿಂದ ರಾವ್, ಕರಂಬಳ್ಳಿ
7. ಸೂರಜ್ ಕುಮಾರ್, ಬಂಟಕಲ್ಲು
8. ರಾಜೇಂದ್ರ ಕುಮಾರ್, ನ್ಯೂ ದೆಹಲಿ
9. ವೈ.ಭುವನೇಂದ್ರ ರಾವ್, ಕೊರಂಗ್ರಪಾಡಿ
10. ಸುಮತಿ ಬಿ. ರಾವ್, ಅದಮಾರು
11. ಅಖಿಲ್ ಆಚಾರ್ಯ, ಬೆಂಗಳೂರು
12. ಬಿ.ದಿನೇಶ್ ರಾವ್, ಬೈಲಕೆರೆ
13. ಬಿ.ಶಿವಸ್ವಾಮಿ ರಾವ್, ಮಂಗಳೂರು
14. ಸುಲತಾ ಕಾಮತ್, ಮೂಡುಬಿದ್ರೆ
15. ಶಿವರಾಜ್
16. ಭವಾನಿ ಮಯ್ಯ, ಹಿರಿಯಡ್ಕ
17. ಯು.ಶಾಂತರಾಮ ಶೆಣೈ, ಕುಂಜಿಬೆಟ್ಟು
18. ಪವನ್ ಕುಮಾರ್, ಕಾಸರಗೋಡು
19. ಸಾತ್ವಿಕ್ ರಾವ್, ಕುಂಜಿಬೆಟ್ಟು
20. ಸಿದ್ಧಾರ್ಥ್ ವಹಿ, ನ್ಯೂ ದೆಹಲಿ
21. ಮೋಹನ್ ರಾವ್ ಪೆರ್ಡೂರು, ಬೆಂಗಳೂರು
22. ಕೆ.ವಿ. ರಾವ್ ಬಲ್ಕುಂಜೆ
23. ಸಿ.ಗೋವಿಂದ ರಾವ್, ಸಂತೆಕಟ್ಟೆ
24. ರಘುಪತಿ ಹೆಬ್ಬಾರ್, ಕುಂದಾಪುರ
25. ಡಾ। ಪ್ರಶಾಂತಿ, ಬೆಂಗಳೂರು
26. ಅರುಣ್ ಶೆಟ್ಟಿ ಮತ್ತು ಶ್ರೀಮತಿ ಅನುಷಾ ಶೆಟ್ಟಿ, ಹರೇಬೆಟ್ಟು
27. ಸೌರಭ್ ಜಯರಾಮ್ ರಾವ್, ಉಡುಪಿ
28. ಎಮ್.ಕೆ. ಸದಾಶಿವಯ್ಯ, ಮಂಗಳೂರು
29. ಎಂ.ಮೋಹನ್ ರಾವ್, ಕಕ್ಕುಂಜೆ
30. ನಿಖಿಲ ಬೆಳ್ಳೆ, ಬಂಟ್ವಾಳ
31. ಶಶೀಂಧ್ರ ಎಲ್.ರಾವ್, ಬೆಂಗಳೂರು
32. ಬಿ.ಆರ್. ವಸಂತ್, ಬೆಂಗಳೂರು
33. ಪಿ.ಚಂದ್ರಶೇಖರ್ ರಾವ್, ಆತ್ರಾಡಿ
34. ಡಾ। ಐ.ಆರ್. ರಾಜ್‌ಕುಮಾರ್, ವಡೋಧರ
35. ಡಾ। ಎನ್. ಅರವಿಂದ್ ಉಪಾಧ್ಯಾಯ, ಪಲಿಮಾರು

## ಶ್ರೀ ಶಾರದಾ ಮಂಟಪದ ಊಟದ ಕೊಠಡಿ ನವೀಕರಣಕ್ಕೆ ದೇಣಿಗೆ ನೀಡಿದವರು

ಹಿಂದಿನ ಸಂಚಿಕೆಯಿಂದ ಮುಂದುವರಿದುದು :

| | | |
|---|---|---|
| 1. | ಬಿ.ಆನಂದ ರಾವ್ ಮತ್ತು ಮಕ್ಕಳು ಲಾಥೋರ್ | 50,000 |
| 2. | ಹರ್ಷವರ್ಧನ ಶಾನುಭೋಗ್ ಬಿನ್ ಲಕ್ಷ್ಮೀನಾರಾಯಣ ಶಾನುಭೋಗ್, ಪೆರಂಪಳ್ಳಿ | 50,000 |
| 3. | ಚೈತ್ರ ಕುಮಾರ್ ಎಮ್.ಎಲ್, ಬಿನ್ ಲಕ್ಷ್ಮೀನಾರಾಯಣ ಶಾನುಭೋಗ್, ಪೆರಂಪಳ್ಳಿ | |
| 4. | ಶ್ರೀಮತಿ ಮತ್ತು ಶ್ರೀ ತಂತ್ರಾಡಿ ರಂಗರಾಯ ನಳಿನಿ ಆರ್. ಶಾನುಭೋಗ್, ಬೆಂಗಳೂರು | 50,000 |
| 5. | ಕೃಷ್ಣಮೂರ್ತಿ, ಬ್ರಹ್ಮಾವರ | 33,333 |
| 6. | ಶ್ರೀಮತಿ ಗಾಯತ್ರಿ ರಾವ್, ಮಣಿಬೆಟ್ಟು, ಶಿರ್ವ | 30,300 |
| 7. | ಡಾ. ರಮೇಶ್ ರಾವ್, ಚೆಂಡುಕಲಾ, ಕಲ್ಯಾಣಪುರ | 30,100 |
| 8. | ಎ.ಪಿ. ಉಮಕಾಂತ್ ಶರ್ಮ, ಮಂಗಳೂರು (ದಿ. ಕಸ್ತೂರಿ ಯು ಶರ್ಮ ಸ್ಮರಣಾರ್ಥ) | 30,000 |
| 9. | ಚೈತನ್ಯ ರಾವ್ ಮತ್ತು ಶ್ರೀಮತಿ ರಮ್ಯಾ ರಾವ್, ಕುತ್ಪಾಡಿ | |
| 10. | ದಿ. ಶ್ರೀಮತಿ ದೇವಕಿ ಮತ್ತು ರಾಮಪ್ಪಯ್ಯ ಶಾನುಬೋಗ್ ಮತ್ತು ದಿ. ಶ್ರೀಮತಿ ಸುಶೀಲಮ್ಮ ಮತ್ತು ಆನಂದ ಭಗವತ್, ಹೆರ್ಮುಂಡೆ ಸ್ಮರಣಾರ್ಥ ಶ್ರೀಮತಿ ಜಯಲಕ್ಷ್ಮೀ ಮತ್ತು ಪ್ರಕಾಶ್ ಭಾಗವತ್ | 30,000 |
| 11. | ಶ್ರೀ ಲಕ್ಷ್ಮೀನಾರಾಯಣ ಶಾನುಭೋಗ್, ಪೆರಂಪಳ್ಳಿ | 30,000 |
| 12. | ಕೆ.ಹರಿಶ್ಚಂದ್ರ ರಾವ್, ಮೂಡುಬೆಟ್ಟು, ಕಟ್ಪಾಡಿ | 30,000 |
| 13. | ಸತೀಶ್ ರಾವ್ ಬಿ.ಎಸ್. ಮತ್ತು ಶ್ರೀಮತಿ ಜಯಂತಿ ಎಸ್.ರಾವ್. ಪರ್ಕಳ | |
| 14. | ಚೆಂಡುಕಳ ಶಂಕರನಾರಾಯಣ ರಾವ್ ಮತ್ತು ಶ್ರೀಮತಿ ಮಹಾಲಕ್ಷ್ಮೀ ಸಿ.ಗಣೇಶ್ ರಾವ್ ಕಾವೂರು ಸ್ಮರಣಾರ್ಥ | 30000 |
| 15. | ಬಿ.ವಾಸುದೇವ ರಾವ್, ವಿ.ಪಿ. ನಗರ | 30,000 |
| 16. | ಶ್ರೀಮತಿ ಅಹಲ್ಯಾ ಬಿ.ಬೈಲಕೆರೆ ಇವರಿಂದ ದಿ.ಬಿ.ನಾರಾಯಣರಾವ್ ಬೈಲಕೆರೆ ಸ್ಮರಣಾರ್ಥ | 30,000 |
| 17. | ಶ್ರೀಮತಿ ಶಾರದಾ ಮತ್ತು ಶ್ರೀ ನರಸಿಂಹ ಭಂಡಿ ಮತ್ತು ಮಕ್ಕಳು, ಪೆರ್ಡೂರು | 30,000 |
| 18. | ಬೆಳ್ಳೆ ಶ್ರೀನಿವಾಸ್ ರಾವ್, ಮುಂಬೈ | 24,000 |
| 19. | ಬಿ. ಜಯರಾಮ್ ರಾವ್ | 20,000 |
| 20. | ಬಿ. ಕೃಷ್ಣಮೂರ್ತಿ ರಾವ್ ಅಂಬಲ್ಪಾಡಿ ಅವರಿಂದ ದಿ. ಬಪ್ಪನಾಡು ಭೋಜ ರಾವ್ ಮತ್ತು ಶ್ರೀಮತಿ ಚಂದ್ರಮ್ಮ ಸ್ಮರಣಾರ್ಥ | 17,777 |
| 21. | ಶ್ರೀಮತಿ ಗೀತಾ ಸುಬ್ರಹ್ಮಣ್ಯ ಸ್ವಾಮಿ, ಬೆಂಗಳೂರು (ತಾಯಿ ಸುಮಿತ್ರಮ್ಮ ಸ್ಮರಣಾರ್ಥ) | 15,001 |
| 22. | ಶ್ರೀಮತಿ ಸರೋಜಿನಿ ಮತ್ತು ಬಿ.ಹರಿಶ್ಚಂದ್ರ ರಾವ್, ಚಿಟ್ಪಾಡಿ | 11,000 |
| 23. | ವನಮಾಲ ವೆಂಕಟರಾವ್, ಪಲಿಮಾರು | 10,500 |
| 24. | ಎಲ್ಲೂರು ಸದಾಶಿವ ರಾವ್ ಮತ್ತು ಶ್ರೀಮತಿ ವೈ. ಸುಲೋಚನಾ ದೇವಿ ಸ್ಮರಣಾರ್ಥ ಡಾ. ವೈ. ರವೀಂದ್ರನಾಥ್ ರಾವ್, ಬ್ರಹ್ಮಾವರ | 10,001 |
| 25. | ಶ್ರೀಮತಿ ವೈ.ಪ್ರತಿಮಾ ವಿಠಲ ರಾವ್, ಚಿಟ್ಪಾಡಿ | 10,001 |
| 26. | ಬಿ. ಆನಂದ ರಾವ್ ಮತ್ತು ಮಕ್ಕಳು, ಲಾಥೋರ್ | 10,000 |
| 27. | ಶ್ರೀಮತಿ ಲಕ್ಷ್ಮೀ ಸೀತಾರಾಮ ಹೆಬ್ಬಾರ್, ಗುಂಡ್ಮಿ, ಸಾಸ್ತಾನ | 10,000 |
| 28. | ಡಾ. ಕೆ. ರವಿರಾಜ್ ರಾವ್ ಮತ್ತು ಶ್ರೀಮತಿ ಸುಜಾತರಾವ್, ಬೈಂದೂರು | 10,000 |
| 29. | ಶ್ರೀಮತಿ ಸುಜಾತ ಎಸ್.ಹೆಬ್ಬಾರ್ | 5001 |
| 30. | ಗಂಗಾಧರ ಪಿ.ಎಮ್. ಹಿರಿಯಡ್ಕ | 5000 |
| 31. | ಗುರುರಾಜ್ ರಾವ್, ಕೊಡವೂರು | 5000 |
| 32. | ಎನ್.ಕೃಷ್ಣ ರಾವ್ ಮತ್ತು ಮಕ್ಕಳು, ದೊಡ್ಡಣಗುಡ್ಡೆ, ಉಡುಪಿ | 5000 |
| 33. | ದೇವದಾಸ್ ಶಾಸ್ತ್ರಿ, ಹಿರಿಯಡ್ಕ | 3,501 |

(ಮುಂದುವರಿಯುವುದು)


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

ಯಶಸ್ವೀ ಎಂಟರ್‌ಪ್ರೈಸಸ್

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

*With Best Complimemts From*

SRI M. SHAILESH RAO B.E., Civil Ph : 9448624324

Civil Engineer & Contractor

SRI MALAVIKA ASSOCIATES

KALSANKA-UDUPI ROAD, UDUPI.

Website : shreemaalavikaassociates.com

Buying and selling shares as easy as checking your emails

Sharekhan Online Trading Account Features:

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



## ಶ್ರೀಮತಿ ಸುಮಂಗಳಾ ರಾವ್

ಮಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್ ಆಗಿ ಆಯ್ಕೆಯಾದ ನಮ್ಮ ಸಮಾಜದ ಶ್ರೀಮತಿ ಸುಮಂಗಳಾ ರಾವ್ ಇವರಿಗೆ ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಇದರ ಪರವಾಗಿ ಹಾರ್ದಿಕ ಶುಭಾಶಯಗಳು. ಇವರ ಸೇವಾವಧಿಯಲ್ಲಿ ಮಂಗಳೂರು ಮಹಾನಗರಪಾಲಿಕೆಯು ಸಮಗ್ರ ಅಭಿವೃದ್ಧಿ ಕಾಣಲಿ ಎಂಬ ಹಾರೈಕೆಗಳು.



## ಶ್ರೀಮತಿ ಉಷಾ ಮಂಜುನಾಥ್

ಶ್ರೀಮತಿ ಉಷಾ ಮಂಜುನಾಥ್ ಹೆಬ್ಬಾರ್ ಇವರು ವರಂಗ ಪಂಚಾಯತ್ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಇವರಿಗೆ ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಇದರ ಪರವಾಗಿ ಹಾರ್ದಿಕ ಶುಭಾಶಯಗಳು. ಇವರ ಮಾದರಿ ಆಡಳಿತವು ಇತರರಿಗೆ ಸ್ಫೂರ್ತಿಯಾಗಲಿ ಹಾಗೂ ಗ್ರಾಮವು ಸಮಗ್ರ ಅಭಿವೃದ್ಧಿ ಹೊಂದಲಿ ಎಂಬ ಹಾರೈಕೆಗಳು.



## ಡಾ| ದೀಪ್ತಿ ರಾವ್

ಮೂಡುಬಿದಿರೆಯ ಬೊಕ್ಕಸ ಸದಾಶಿವ ರಾವ್ ಹಾಗೂ ಪ್ರೀತಿ ದಂಪತಿಗಳ ಪುತ್ರಿಯಾದ ಡಾ| ದೀಪ್ತಿ ರಾವ್ ಬಿ.ಎ.ಎಮ್.ಎಸ್. ಪದವಿಯಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಿಗಳ ವಿಶ್ವವಿದ್ಯಾಲಯ ಬೆಂಗಳೂರು ಇವರು ನಡೆಸಿದ ಪರೀಕ್ಷೆಯಲ್ಲಿ 4ನೇ ರ್‍ಯಾಂಕ್ ಗಳಿಸಿರುತ್ತಾರೆ.



ಬಾರಕೂರು ಕುಮಾರಸ್ವಾಮಿ ಹಾಗೂ ಶ್ರೀಮತಿ ಸವಿತಾ ಎರ್ಮಾಳು ಇವರ ಪುತ್ರಿ ಕುಮಾರಿ ನಮನ ಇವರಿಗೆ ಕರ್ನಾಟಕ ಸರಕಾರದಿಂದ ಮಹಿಳಾ ದಿನಾಚರಣೆಯಂದು ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಇತ್ತು ಬೆಂಗಳೂರಿನಲ್ಲಿ ಗೌರವಿಸಲಾಯಿತು.



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನಕ್ಕೆ ಕೇರಳದ ತಿರುವನಂತಪುರದ ಶ್ರೀ ಅನಂತಪದ್ಮನಾಭ ಸ್ವಾಮಿ ದೇವಸ್ಥಾನದ ಮಹಾರಾಜರಾದ ಪೂಜ್ಯ ಶ್ರೀ ಪದ್ಮನಾಭ ವರ್ಮರು ಭೇಟಿ ಇತ್ತು ಶ್ರೀ ದೇವಸ್ಥಾನದ ಅರ್ಚಕರಾದ ಅನಂತಪದ್ಮನಾಭ ಭಟ್ ಇವರಿಂದ ಶ್ರೀ ದೇವರ ಪ್ರಸಾದ ಸ್ವೀಕರಿಸಿದರು. ಅವರ ಆಪ್ತ ಕಾರ್ಯದರ್ಶಿ ರಾಮು, ನಿವೃತ್ತ ಪ್ರಾಂಶುಪಾಲ ಸೀತಾರಾಮ ಶೆಟ್ಟಿ, ಜಯರಾಮ ರಾವ್, ಭಜನಾ ಗುರುಗಳಾದ ರಾಘವೇಂದ್ರ ರಾವ್, ಕೃಷ್ಣಮೂರ್ತಿ ರಾವ್, ಶ್ರೀ ಮಾಸ್ತಿದುರ್ಗಾ ಮಹಿಳಾ ಭಜನಾ ಬಳಗದ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

-: ಶುಭಾಶಯಗಳು :-
**"ಶ್ರೀ ಶಾರದಾಂಬೆಗೆ ವಂದಿಸುತ್ತಾ "ಶ್ರೀ ಶಾರದಾ" ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ ದಾರಿದೀಪವಾಗಲಿ" ಎಂದು ಹಾರೈಸುವ**
**ಜಿ.ಕೆ.ಕೋಲ್ವೆ, ಉಡುಪಿ**
ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ




ಕಂಪ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161 97417 85551
**ಹರಿಕೃಷ್ಣ ಡಿಜಿಟಲ್ಸ್**
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66. ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990960



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೆಲ್ ವೃಂದಾವನ ಕದ್ರಿ, ಮಂಗಳೂರು
ವಿನೀತ್ ಮೆಡಿಕಲ್ಸ್ ಪಡುಬಿದ್ರಿ
ವಿಷ್ಣು ಟ್ರಾನ್ಸ್‌ಪೋರ್ಟ್ ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್ ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ



# ವಿದ್ಯಾರ್ಥಿ ವೇತನ ನಿಧಿಗೆ ದೇಣಿಗೆ



ಉಡುಪಿಯ ಶ್ರೀ ರಂಗರಾವ್ ಮತ್ತು ಶ್ರೀಮತಿ ಗಿರಿಜಾ ದಂಪತಿಗಳ ಪುತ್ರರಾದ ಡಾ। ರವಿರಾಜ ರಾವ್ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ವಿದ್ಯಾರ್ಥಿ ವೇತನ ನಿಧಿಗೆ ರೂ.1,00,000/- ದೇಣಿಗೆ ನೀಡಿರುತ್ತಾರೆ. ಇವರು ಕಳೆದ ಸುಮಾರು 35 ವರ್ಷಗಳಿಂದ ಬೈಂದೂರು ಹಾಗೂ ಭಟ್ಕಳ ಪರಿಸರದಲ್ಲಿ "ಮಕ್ಕಳ ತಜ್ಞ"ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಕ್ಲಿನಿಕ್‌ಗೆ "ಬಾಲಕ್ಷೇಮ" ಎಂದೇ ಹೆಸರನ್ನು ಇಟ್ಟುಕೊಂಡು "ಮಕ್ಕಳ ಡಾಕ್ಟರ್" ಎಂದೇ ಪ್ರಸಿದ್ಧಿಯನ್ನು ಪಡೆದಿರುತ್ತಾರೆ. ತಮ್ಮ ಉತ್ತಮ ಮಾತುಗಳಿಂದ ಹಾಗೂ ಸೇವಾ ಮನೋಭಾವನೆಗಳಿಂದ ಉತ್ತಮ ರೀತಿಯ ಸೇವೆ ನೀಡುತ್ತಿದ್ದು ಬೈಂದೂರು ರೋಟರಿ ಸದಸ್ಯರಾಗಿರುತ್ತಾರೆ. ಜೊತೆಗೆ ಕರ್ನಾಟಕ ಸರಕಾರದ ಆರೋಗ್ಯ ಇಲಾಖೆಯಲ್ಲಿ ವೈದ್ಯಾಧಿಕಾರಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಪತ್ನಿ ಶ್ರೀಮತಿ ಸುಜಾತಾ ರಾವ್‌ರವರು ಬೈಂದೂರು ಇನ್ನರವೀಲ್ ಕ್ಲಬ್ಬಿನ ಅಧ್ಯಕ್ಷೆಯಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಇದೀಗ ಇವರು ತಮ್ಮ ಮಗ ಹಿಮಾಂಶುವಿನ ನೆನಪಿನಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಸಹಾಯಹಸ್ತ ಚಾಚಿರುವುದನ್ನು ಅಭಿನಂದಿಸುತ್ತಾ ಅವರಿಗೆ ಸಂಘದ ಪರವಾಗಿ ಕೃತಜ್ಞತೆಗಳು.

## ಪ್ರಕಟಣೆ

**ಶ್ರೀ ಶಾರದಾ ಮಂಟಪದ ಸ್ಥಿರ ದೂರವಾಣಿ ಸಂಖ್ಯೆ ಬದಲಾಗಿದ್ದು ನೂತನ ಸಂಖ್ಯೆ 0820-2958444 ಆಗಿರುತ್ತದೆ. ಸಮಾಜಬಾಂಧವರು ಗಮನಿಸಬೇಕಾಗಿ ವಿನಂತಿ.**

ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಸ್ಥರಿಗೆ ಶ್ರೀ ಶಾರದಾ ಮಂಟಪದಲ್ಲಿ ಎರಡು ವಸತಿಗೃಹ ಖಾಲಿ ಇದ್ದು ಮಿತದರದಲ್ಲಿ ಬಾಡಿಗೆಗೆ ಲಭ್ಯವಿದೆ.
ಒಂದು ಕುಟುಂಬ ಅಥವಾ ಕೂಡುವಿಕೆಯಲ್ಲಿ ವಿದ್ಯಾರ್ಥಿಗಳು ಅಥವಾ ಉದ್ಯೋಗಸ್ಥರು ಈ ಸೌಕರ್ಯದ ಉಪಯೋಗ ಪಡೆಯಬಹುದು.
ಸಂಪರ್ಕ ಸಂಖ್ಯೆ 0820-2958444, 9449254846 (ಪ್ರಭಾಕರ ಭಂಡಿ)

ಶುಭಾಶಯಗಳೊಂದಿಗೆ

**ಡಾ। ವಿಜಯಾ ರಾವ್ ವೈ.ಬಿ**
ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು



ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327

# ಶ್ರೀ ಸುಬ್ರಹ್ಮಣ್ಯ ಸಭಾದಿಂದ ಶೃಂಗೇರಿ ಜಗದ್ಗುರುಗಳ ದರ್ಶನ



ಪುತ್ತೂರಿನ "ಶಿವಸದನ"ವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಹೆಸರಿಗೆ ವರ್ಗಾವಣೆಗೊಂಡ ಪ್ರಯುಕ್ತ ಶೃಂಗೇರಿಗೆ ತೆರಳಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥ ಸನ್ನಿಧಾನಂಗಳವರಿಗೆ ಪಾದಪೂಜೆ, ಭಿಕ್ಷಾವಂದನೆ ಸೇವೆ ಸಲ್ಲಿಸಿ, ಫಲ ಸಮರ್ಪಿಸಿ ಅನುಗ್ರಹ ಮಂತ್ರಾಕ್ಷತೆ ಪಡೆಯಲಾಯಿತು. ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿದಾನಂಗಳವರು ಶ್ರೀ ಸಭಾದ "ಶಿವಸದನ"ದ ವಿವಿಧ ಧನಸಹಾಯಗಳ ಮನವಿ ಪತ್ರವನ್ನು ಬಿಡುಗಡೆಗೊಳಿಸಿ ಆಶೀರ್ವದಿಸಿದರು. ಶ್ರೀ ಶಾರದಾಂಬೆಗೆ ಲಕ್ಷ ಕುಂಕುಮಾರ್ಚನೆ ಸೇವೆ ನಡೆಸಿ ಸರ್ವರಿಗೂ ಸನ್ಮಂಗಳಕ್ಕಾಗಿ ಪ್ರಾರ್ಥಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ, ಪದಾಧಿಕಾರಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆ, ಡಾ। ಎ.ಪಿ.ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀ ಅನಿಲ್ ಕುಮಾರ್ ಬಿ.ಎಸ್, ಶ್ರೀ ಪಿ.ಶ್ರೀಕಾಂತ್ ರಾವ್, ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್, ಯುವ ವೇದಿಕೆಯ ಶ್ರೀ ಮನೀಷ್ ರಾವ್, ಶ್ರೀ ಅನಿಲ್ ಎನ್., ನಿರ್ದೇಶಕರುಗಳು, ಸದಸ್ಯರು ಈ ಪುಣ್ಯ ಕಾರ್ಯದಲ್ಲಿ ಭಾಗವಹಿಸಿದರು.

# ಶ್ರೀ ಸಚ್ಚಿದಾನಂದಮೂರ್ತಿಯವರಿಗೆ ಸನ್ಮಾನ



ಕರ್ನಾಟಕ ಸರಕಾರದ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದಮೂರ್ತಿಯವರನ್ನು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಿಂದ ಗೌರವಿಸುವ ಕಾರ್ಯಕ್ರಮ ಮಂಗಳೂರಿನ ಶ್ರೀಕೃಷ್ಣ ಮಂದಿರದಲ್ಲಿ ನಡೆಯಿತು. ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್, ಮಹಿಳಾ ವೇದಿಕೆಯ ಆಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಕಾರ್ಯದರ್ಶಿ ಪುಷ್ಪಾವತಿ ಶ್ರೀನಿವಾಸ್, ನಿರ್ದೇಶಕರು, ಸದಸ್ಯರು ಭಾಗವಹಿಸಿದರು.




Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org